MR. SPEAKER : You please ask clarification. ಪುಟ್ಟಣ್ಣಯ್ಯನವರೇ ತಾವು ಸ್ಪಷ್ಟೀಕರಣ ಕೇಳಿ.

ಶ್ರೀ ಯು.ಆರ್. ಸಭಾಪತಿ : ಈ ರೀತಿಯಾದರೆ ನಾನು ಇದನ್ನು ಒಪ್ಪುವುದಿಲ್ಲ ಅಧ್ಯಕ್ಷರೇ.

ಅಧ್ಯಕ್ಷರು : ನೀವು ಒಪ್ಪದೇ ಇದ್ದರೆ ಇಲ್ಲಿ ಸಮಯವಿಲ್ಲವಿದ್ದಾರೆ. ನೀವು ಒಬ್ಬರೇ ಕೆಲ್ಲ ಸದಸ್ಯರು. ಪುಟ್ಟಣ್ಣಯ್ಯನವರೇ ನೀವು ಸ್ಪಷ್ಟೀಕರಣ ಕೇಳಿ.

ಶ್ರೀ ಯು.ಆರ್. ಸಭಾಪತಿ : ನನಗೆ ಜೀಕಾಗಿರುವುದು ಇಲ್ಲಿರುವ ರೀತಿಯಲ್ಲಿ "..region will be made before clearing the new project in the district". ಏಂದು ಹೇಳುವಂಥದ್ದು ಪ್ಲಾನಿಹೋದಲ್ಲಿ ಇಲ್ಲ planning capacity ಎಲ್ಲಾಗಿದ ಸದನಕ್ಕೆ ಅದನ್ನು ಪ್ರೊಡ್ಯೂಸ್ ಮಾಡಿ, ಏಕೆ ಸುಳ್ಳು ಹೇಳುತ್ತೀರಿ? ಇದಕ್ಕೆ ನೀವು ಉತ್ತರ ಕೊಡದಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ. ನನಗೆ ಸ್ಪಷ್ಟವಾದ ಉತ್ತರ ಬೇಕು.

ಶ್ರೀ ಹೆಚ್. ಡಿ. ದೇವೇಗೌಡ : ಗೌವರ್ನರ್ ಭಾಷಣದಲ್ಲಿ ಹೇಳಿದ್ದಾರೆ.....

(ಈ ಮಾತಿದಲ್ಲಿ ಯು.ಆರ್. ಸಭಾಪತಿಯವರು ಮುಖ್ಯಮಂತ್ರಿಗಳ ಉತ್ತರಕ್ಕೆ ಅತೃಪ್ತರಾಗಿ ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೇ, ಬಹಳ ಕಾಳಜಿಯಲ್ಲಿ ಕೃಷಿ ಕ್ಷೇತ್ರದ ಬಗ್ಗೆ ಮಾನ್ಯ ಸಭಾ ನಾಯಕರು ಹೊಸದಾದ ಬದಲಾವಣೆ ಬಗ್ಗೆ ಮಾತನಾಡಿದರು. ಬದಲಾವಣೆ ಏನಾದರೂ ಮಾಡಲಿ, ಈಗ ಹತ್ತಿ ಬೆಳೆಗಾರರಿಗೆ ಕರ್ನಾಟಕ ರಾಜ್ಯದಲ್ಲಿ ಬಹಳ ಅನಾನುಕೂಲವಾಗುವ ರೀತಿಯ ಪರಿಸ್ಥಿತಿ ಸೃಷ್ಟಿಯಾಗಿದೆ. ರೂ. 3,800 ಇದ್ದಂಥ ಹತ್ತಿಯ ಬೆಲೆ ಈಗ ರೂ. 1,600 ರೂ. ಆಗಿದೆ. ರೂ. 1,600 ಗಳಿಗೆ ಹತ್ತಿಯನ್ನು ಮಾರಿದರೆ ಅದಕ್ಕೆ ಸಂಬಂಧಪಟ್ಟ ಹತ್ತಿ ಬಟ್ಟೆಯ ಬೆಲೆ ಒಂದರಿಂದ 4 ಪಟ್ಟು ಜಾಸ್ತಿಯಾಗಿದೆ. ಇನ್ನೂಂದು ಹೇಳಬೇಕೆಂದರೆ ಇಪ್ಪತ್ತನ ದಿವಸ ಈರುಳ್ಳಿ ಬೆಲೆ 600-700 ರೂ.ಗಳಿಂದ 150-200 ರೂಗಳಿಗೆ ಇಳಿದಿದೆ. ಏನೋ 40 ವರ್ಷದಿಂದ ಮಾಡದೇ ಇರತಕ್ಕಂಥ ಕೃಷಿ ಬೆಳೆ ಬೆಲೆ ಬಗ್ಗೆ ನೀತಿ ಮಾಡುವುದಕ್ಕೆ ಈ ಸರ್ಕಾರದ ಕೈಯಲ್ಲಿ ಆಗುತ್ತದೆ ಏಂದು ನಾನು ಹೇಳುವುದಕ್ಕಾಗುವುದಿಲ್ಲ. ಕಡೇ ಪಕ್ಷ ಆ ದಿಕ್ಕಿನಲ್ಲಿ ಪ್ರಯತ್ನವನ್ನಾದರೂ ಮಾಡಬೇಕು. ಆಯಾಯಾ ಬೆಳೆಯನ್ನು ಬೆಳೆಯತಕ್ಕಂಥ ರೈತರ ಏಂದು ಸಮಿತಿಯನ್ನು ಮಾಡಿ, ರಾಜ್ಯ ಸರ್ಕಾರ ಏನಾದರೂ ಏಂದು ಮಾಡಬಹುದು ಏನ್ನತಕ್ಕಂಥ ಏಂದು ಸಣ್ಣ ತೀರ್ಮಾನ, ಕನಿಷ್ಠ ಏಂದು ರೇಷ್ಮೆ ಬಳೆ ಆಗಬಹುದು, ಯಾವುದೇ ಬಳೆ ಆಗಬಹುದು, ಆದರೆ ಯಾವುದೇ ಬಳೆ ಬಗ್ಗೆ ಇದುವರಗೂ ಕೂಡ ಆ ರೀತಿಯ ಸರ್ಕಾರ ಮಾಡಿಲಿಲ್ಲ. ಆದರೆ ಕೃಷಿ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆ ಮಾಡುತ್ತೇವೆ, 26826 ಹಳ್ಳಿಗಳಲ್ಲಿರತಕ್ಕಂಥ ಗ್ರಾಮೀಣ ಜನರು ಕೃಷಿಯಲ್ಲಿ ಏನು ಬಯಸುತ್ತಿದ್ದಾರೆ, ಅವರ ಜೀವನದ ಬಗ್ಗೆ ಆಲೋಚನೆಯನ್ನು ಮಾಡುತ್ತೇವೆ ಏಂದು ಹೇಳುವಂಥ ಏಂದು ಸರ್ಕಾರ ಆ ದಿಕ್ಕಿನಲ್ಲಿ ಏಂದು ಚೂರಾದರೂ ಕಲಸ ಮಾಡಿದ್ದರೆ ಈ ಸರ್ಕಾರಕ್ಕೆ ಅವರ ಬಗ್ಗೆ ಕಾಳಜಿ ಇದೆ ಏಂದು